## 1

ಈ ದೊಡ್ಡ ಮನೆಯ ಒಳಗೊಂದು 'ಅನುಭವ ಮಂಟಪ'ವಿದ್ದು, ಅಲ್ಲಿ ಒಂದು ಜಗಲಿಯ ಮೇಲೆ ಬಸವಣ್ಣನವರ ಕಂಚಿನಮೂರ್ತಿ, ಅದರ ಮುಂದೆ ಕಂಚಿನ ಮೊಳದೆತ್ತರದ ದೀಪಸ್ತಂಭದಲ್ಲಿ ದೀವಿಗೆ ಬೆಳಗುತ್ತಿತ್ತು. ಅದರ ಬೆಳಕಿನಲ್ಲಿ ಬಸವಮೂರ್ತಿಗೆ ಜೀವ ಬಂದಂತೆ ಹೊಳೆಯುತ್ತಿತ್ತು. ಅಂದು ಬಸವ ಜಯಂತಿ. ಶಿವಮಲ್ಲಯ್ಯ ತಾತ ಪ್ರತಿವರ್ಷದಂತೆ ಈ ವರ್ಷದ ಈ ದಿನ ಎಂದಿನಂತೆ ಬಿದಿರಿನ ಪುಟ್ಟಿಯಲ್ಲಿದ್ದ ಹೂಗಳನ್ನು ಬೊಗಸೆಯಿಂದ ಎತ್ತಿಕೊಂಡು ಅಲಂಕಾರದ ಬಸವಮೂರ್ತಿಯ ತಲೆಯ ಮೇಲೆ ಮೆಲ್ಲಗೆ ಸುರುವಿ, ಕೈಮುಗಿದು ಹಿಂದಕ್ಕೆ ಸರಿದು ಬಸವಣ್ಣನ ವಚನ ಹೇಳತೊಡಗಿದ. ಮನೆ ಮಂದಿಯಲ್ಲದೆ ಊರುಕೇರಿಯ ಜನರೂ ಎಂದಿನಂತೆ ಬಂದು ನಿಂತಿದ್ದರು. ಮುಂದೆ ಅವರೆಲ್ಲರೂ ಬಂದು ಬಂದು ಹಿಡಿ ಹೂ ಅರ್ಪಿಸಿ ಹಿಂದೆ ಸರಿದು ನಿಂತು, ಶಿವಮಲ್ಲಯ್ಯ ತಾತ ಹೇಳುತ್ತಿದ್ದ ವಚನಗಳನ್ನು ಕೇಳುತ್ತ ನಿಲ್ಲುತ್ತಿದ್ದರು. ತಾತನ ಬಾಯಿಯಿಂದ ವಚನಗಳನ್ನು ಕೇಳುವುದೇ ಪುಣ್ಯವೆಂದು ತಿಳಿದು ಭಕ್ತಿಯಿಂದ ಮೈಮರೆಯುವ ಮಂದಿಯಿತ್ತು. '...ಕೂಡಲಸಂಗನ ಶರಣರು ಮನದೆರೆದು ಮಾತಾಡಿದಡೆ ಲಿಂಗವ ಕಾಣಬಹುದು' ಎಂಬ ವಚನ ಮುಗಿಯುತ್ತಿದ್ದಂತೆ ಎಲ್ಲರೂ ಕೈ ಮುಗಿದರು. 'ದಯವಿಲ್ಲದ ಧರ್ಮವಾವುದಯ್ಯಾ? ದಯಬೇಕು ಸಕಲ ಪ್ರಾಣಿಗಳಲ್ಲಿ, ದಯವೇ ಧರ್ಮದ ಮೂಲವಯ್ಯಾ, ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ' ಮತ್ತೊಂದು ವಚನ ಹೇಳಿ ಮುಗಿಸಿದ. ಶಿವುಮಲ್ಲಯ್ಯ ತಾತ ವಚನ ತತ್ತ್ವಗಳ ಅನುಯಾಯಿ. ಬಸವಣ್ಣನ ಅಪ್ಪಟ ಭಕ್ತ.

